**All India Radio: Bangalore**
**National Bulletin In Kannada**
**02.08.2026  7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<>><><*><><<>**

ಮುಖ್ಯಾಂಶಗಳು

**೧. ‘ನಶಾ ಮುಕ್ತ ಯುವ ಫಾರ್ ವಿಕಸಿತ ಭಾರತ’ ಅಭಿಯಾನಕ್ಕೆ ಪ್ರಧಾನಿ ನರೇಂದ್ರ ಮೋದಿ ಇಂದು ಚಾಲನೆ**

**೨. ಇರಾನ್ ವಿರುದ್ಧ ಮಿಲಿಟರಿ ದಾಳಿ ತೀವ್ರಗೊಳಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ**

**೩. ಕಾಮನ್‌ವೆಲ್ತ್ ಕ್ರೀಡಾಕೂಟ; ೩೯ ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೇರಿದ ಭಾರತ**

**೪. ಬಾನ್ ಓಪನ್ ಟೆನಿಸ್; ಭಾರತದ ರಾಮ್‌ಕುಮಾರ್ ರಾಮನಾಥನ್, ವಿಜಯ್ ಸುಂದರ್ ಪ್ರಶಾಂತ್ ಜೋಡಿಗೆ ಡಬಲ್ಸ್ ಪ್ರಶಸ್ತಿ**

**<>><><*><><<>**

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ‘ನಶಾ ಮುಕ್ತ ಯುವ ಫಾರ್ ವಿಕಸಿತ ಭಾರತ’ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ. ಈ ಕುರಿತು ಮಾಹಿತಿ ನೀಡಿ ಕೇಂದ್ರ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಡಾ.ಮನ್ಸುಖ್ ಮಾಂಡವೀಯ, ಉದ್ಘಾಟನಾ ಕಾರ್ಯಕ್ರಮದಲ್ಲಿ ೧ ಕೋಟಿಗೂ ಹೆಚ್ಚು ಮಂದಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ವೇಳೆ ಭಾಗವಹಿಸುವವರು ನಶಾ ಮುಕ್ತ ಪ್ರತಿಜ್ಞೆ ಕೈಗೊಳ್ಳಲಿದ್ದಾರೆ ಎಂದು ತಿಳಿಸಿದ್ದಾರೆ. ಯುವಜನರು ಮಾದಕ ವಸ್ತುಗಳ ದುರ್ಬಳಕೆಯಿಂದ ದೂರವಿರುವಂತೆ ಉತ್ತೇಜಿಸುವ ಉದ್ದೇಶದಿಂದ ಈ ಅಭಿಯಾನವನ್ನು ೧೦೦ ವಾರಗಳ ಕಾಲ ದೇಶಾದ್ಯಂತ ಆಂದೋಲನವಾಗಿ ನಡೆಸಲಾಗುವುದು. ಪ್ರತಿ ಭಾನುವಾರ ಯುವಕರ ನೇತೃತ್ವದಲ್ಲಿ ಜಾಗೃತಿ ಅಭಿಯಾನ, ಸಮುದಾಯ ರ್‍ಯಾಲಿಗಳು ಹಾಗೂ ನಶಾ ಮುಕ್ತ ಪ್ರತಿಜ್ಞೆ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ವಿವರಿಸಿದ್ದಾರೆ. ಮೈ ಭಾರತ್ ಸ್ವಯಂಸೇವಕರು, ರಾಷ್ಟ್ರೀಯ ಸೇವಾ ಯೋಜನೆ, ಯುವಕ ಸಂಘಗಳು, ಶಾಲೆಗಳು, ಕಾಲೇಜುಗಳು, ವಿಶ್ವವಿದ್ಯಾಲಯಗಳು, ಸ್ವಯಂಸೇವಾ ಸಂಸ್ಥೆಗಳು, ಕೈಗಾರಿಕಾ ಸಂಘಟನೆಗಳು

ಹಾಗೂ ಆಧ್ಯಾತ್ಮಿಕ ಸಂಸ್ಥೆಗಳು ಅಭಿಯಾನದಲ್ಲಿ ಪಾಲ್ಗೊಳ್ಳಲಿವೆ ಎಂದು ಸಚಿವ ಡಾ.ಮನ್ಸುಖ್ ಮಾಂಡವೀಯ ಮಾಹಿತಿ ನೀಡಿದ್ದಾರೆ.

**<>><><*><><<>**

ಉಜ್ಬೇಕಿಸ್ತಾನ್‌ನ ವಿದೇಶಾಂಗ ಸಚಿವ ಸೈದೋವ್ ಭಕ್ತಿಯೋರ್ ಒಡಿಲೋವಿಚ್ ಇಂದಿನಿಂದ ಈ ತಿಂಗಳ ೫ ರವರೆಗೆ ಭಾರತಕ್ಕೆ ಅಧಿಕೃತ ಭೇಟಿ ನೀಡಲಿದ್ದಾರೆ. ತಮ್ಮ ಭೇಟಿಯ ಸಮಯದಲ್ಲಿ, ಒಡಿಲೋವಿಚ್ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಲಿದ್ದಾರೆ ಮತ್ತು ವಿದೇಶಾಂಗ ಸಚಿವ ಡಾ. ಎಸ್.ಜೈಶಂಕರ್ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ನಂತರ ಅವರು ದೆಹಲಿಯಲ್ಲಿ ವ್ಯಾಪಾರ ವೇದಿಕೆಯಲ್ಲಿ ಭಾಗವಹಿಸಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

**<>><><*><><<>**

ಐದು ಡೈವಿಂಗ್ ಸಪೋರ್ಟ್ ಕ್ರಾಫ್ಟ್ ಯೋಜನೆಗಳ ಐದನೇ ಹಡಗಾದ ಡಿಎಸ್‌ಸಿ ಎ-೧೪ ಅನ್ನು ಕೋಲ್ಕತ್ತಾದ ತಿಟಗಢದಲ್ಲಿ ಉದ್ಘಾಟಿಸಲಾಯಿತು. ಈ ಹಡಗುಗಳು ಉತ್ತಮ ಸ್ಥಿರತೆ, ವರ್ಧಿತ ಡೆಕ್ ಪ್ರದೇಶ ಮತ್ತು ಸುಧಾರಿತ ಸಮುದ್ರ ಕೀಪಿಂಗ್ ಗುಣಲಕ್ಷಣಗಳನ್ನು ನೀಡುತ್ತವೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಇದು ಡೈವಿಂಗ್ ಕಾರ್ಯಾಚರಣೆಗಳನ್ನು ಕೈಗೊಳ್ಳಲು ಸೂಕ್ತವಾಗಿದೆ. ಭಾರತೀಯ ಶಿಪ್ಪಿಂಗ್ ನೋಂದಣಿಯ ನೌಕಾ ನಿಯಮಗಳಿಗೆ ಅನುಸಾರವಾಗಿ ಹಡಗನ್ನು ವಿನ್ಯಾಸಗೊಳಿಸಲಾಗಿದೆ ಮತ್ತು ನಿರ್ಮಿಸಲಾಗಿದೆ. ಈ ಹಡಗುಗಳ ಸೇರ್ಪಡೆಯೊಂದಿಗೆ, ಡೈವಿಂಗ್ ಬೆಂಬಲ, ನೀರೊಳಗಿನ ತಪಾಸಣೆ, ರಕ್ಷಣೆಗೆ ನೆರವು ಮತ್ತು ಕರಾವಳಿ ಕಾರ್ಯಾಚರಣೆಯ ನಿಯೋಜನೆಯಲ್ಲಿ ಭಾರತೀಯ ನೌಕಾಪಡೆಯ ಸಾಮರ್ಥ್ಯ ಹೆಚ್ಚಳವಾಗಲಿದೆ. ೭೦ ಪ್ರತಿಶತದಷ್ಟು ಮುಖ್ಯ ಮತ್ತು ಸಹಾಯಕ ಉಪಕರಣಗಳನ್ನು ಸ್ಥಳೀಯ ತಯಾರಕರಿಂದ ಪಡೆಯುವುದರೊಂದಿಗೆ, ಡೈವಿಂಗ್ ಸಪೋರ್ಟ್ ಕ್ರಾಫ್ಟ್, ಸರ್ಕಾರದ ಆತ್ಮನಿರ್ಭರ ಭಾರತ್ ಮತ್ತು ಮೇಕ್ ಇನ್ ಇಂಡಿಯಾ ಉಪಕ್ರಮಗಳ ಬಲ ನೀಡಿದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ.

**<>><><*><><<>**

ಸುಮಾರು ಆರು ವರ್ಷಗಳ ನಂತರ ಹಿಮಾಚಲ ಪ್ರದೇಶದ ಕಿನ್ನೌರ್ ಜಿಲ್ಲೆಯ ಶಿಪ್ಕಿ-ಲಾ ಮೂಲಕ ಭಾರತ ಮತ್ತು ಚೀನಾ ನಡುವಿನ ಗಡಿಯಾಚೆಗಿನ ವ್ಯಾಪಾರ ಪುನರಾರಂಭಗೊಂಡಿದೆ. ಕಿನ್ನೌರ್ ಜಿಲ್ಲೆಯ ಪೂಹ್ ಉಪವಿಭಾಗದಲ್ಲಿರುವ ಗಡಿ ಪಂಚಾಯತ್ ನಮ್ಗ್ಯದಲ್ಲಿ ಚುಪನ್ ಟ್ರೇಡ್ ಮಾರ್ಟ್ ಅನ್ನು ಕಂದಾಯ ಸಚಿವ ಜಗತ್ ಸಿಂಗ್ ನೇಗಿ ಉದ್ಘಾಟಿಸಿದರು. ಅಲ್ಲದೇ ಗಡಿಯಾಚೆಗಿನ

ವ್ಯಾಪಾರವನ್ನು ಪ್ರಾರಂಭಿಸಲು ೧೭ ವ್ಯಾಪಾರಿಗಳ ಗುಂಪಿಗೆ ಚಾಲನೆ ನೀಡಿದರು. ಕೋವಿಡ್-೧೯ ಸಾಂಕ್ರಾಮಿಕ ರೋಗದ ನಂತರ ೨೦೨೦ ರಿಂದ ವ್ಯಾಪಾರವನ್ನು ಸ್ಥಗಿತಗೊಳಿಸಲಾಗಿತ್ತು.

**<>><><*><><<>**

ತೆಲಂಗಾಣ ರಾಜ್ಯಾದ್ಯಂತ ಬಾಲ ಕಾರ್ಮಿಕ ಪದ್ಧತಿ ಮತ್ತು ಮಕ್ಕಳ ಕಳ್ಳಸಾಗಣೆ ಕೊನೆಗೊಳಿಸುವ ಗುರಿಯನ್ನು ಹೊಂದಿರುವ 'ಆಪರೇಷನ್ ಮುಸ್ಕಾನ್-೧೨' ಎಂಬ ಒಂದು ತಿಂಗಳ ವಿಶೇಷ ಅಭಿಯಾನದಲ್ಲಿ ತೆಲಂಗಾಣ ಪೊಲೀಸರು, ೬ ಸಾವಿರ ೩೦೭ ಮಕ್ಕಳನ್ನು ರಕ್ಷಿಸಿದ್ದಾರೆ. ಜುಲೈ ೧ ರಿಂದ ೩೧ ರವರೆಗೆ ಈ ಕಾರ್ಯಾಚರಣೆ ನಡೆಯಿತು. ೧೨೪ ಉಪವಿಭಾಗದ ತಂಡಗಳಿಂದ ಸುಮಾರು ೬೨೦ ಪೊಲೀಸ್ ಸಿಬ್ಬಂದಿ ಭಾಗವಹಿಸಿದ್ದರು. ಕಾನೂನುಗಳು ಮತ್ತು ಕಾರ್ಯವಿಧಾನಗಳ ಕುರಿತು ತರಬೇತಿಯ ನಂತರ, ತಂಡಗಳು ರೈಲ್ವೆ ನಿಲ್ದಾಣಗಳು, ಬಸ್ ನಿಲ್ದಾಣಗಳು, ದೇವಾಲಯಗಳು, ಇಟ್ಟಿಗೆ ಗೂಡುಗಳು, ಮೆಕ್ಯಾನಿಕ್ ಅಂಗಡಿಗಳು, ನಿರ್ಮಾಣ ಸ್ಥಳಗಳು ಮತ್ತು ಚಹಾ ಅಂಗಡಿಗಳು ಸೇರಿದಂತೆ ಬಾಲ ಕಾರ್ಮಿಕರು ಸಾಮಾನ್ಯವಾಗಿ ಕಂಡುಬರುವ ಸ್ಥಳಗಳ ಮೇಲೆ ದಾಳಿ ನಡೆಸಲಾಯಿತು ಎಂದು ಮಹಿಳಾ ಸುರಕ್ಷತಾ ವಿಭಾಗದ ನಿರ್ದೇಶಕಿ ಚಾರು ಸಿನ್ಹಾ ತಿಳಿಸಿದ್ದಾರೆ. ರಕ್ಷಿಸಲಾದ ಮಕ್ಕಳಲ್ಲಿ ೫ ಸಾವಿರದ ೮೯೨ ಹುಡುಗರು ಮತ್ತು ೪೧೫ ಹುಡುಗಿಯರು. ೩ ಸಾವಿರದ ೪೪೭ ತೆಲಂಗಾಣಕ್ಕೆ ಸೇರಿದವರಾಗಿದ್ದರೆ, ೨ ಸಾವಿರದ ೮೬೦ ಇತರ ರಾಜ್ಯಗಳು ಮತ್ತು ನೇಪಾಳದವರು ಆಗಿದ್ದಾರೆ. ರಕ್ಷಿಸಲ್ಪಟ್ಟವರಲ್ಲಿ ೫ ಸಾವಿರದ ೪೧ ಬಾಲಕಾರ್ಮಿಕರು, ೬೪೭ ಬೀದಿ ಮಕ್ಕಳು, ೪೩ ಬಾಲ ಭಿಕ್ಷುಕರು, ಮತ್ತು ೧೧ ಓಡಿಹೋದವರು, ಶಾಲೆ ಬಿಟ್ಟವರು, ಅಕ್ರಮ ದತ್ತು ಸ್ವೀಕಾರ ಮತ್ತು ಬಾಲ್ಯ ವಿವಾಹಕ್ಕೆ ಒಳಗಾದವರಾಗಿದ್ದಾರೆ ಎಂದು ಅವರು ಮಾಹಿತಿ ತಿಳಿಸಿದ್ದಾರೆ.

**<>><><*><><<>**

ಇರಾನ್ ವಿರುದ್ಧ ಮಿಲಿಟರಿ ದಾಳಿಯನ್ನು ತೀವ್ರಗೊಳಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ಹಾಕಿದ್ದಾರೆ. ಹಡಗುಗಳ ಮೇಲಿನ ದಾಳಿಯನ್ನು ನಿಲ್ಲಿಸಿ ಇರಾನ್, ಮಾತುಕತೆಗೆ ಮರಳುವವರೆಗೆ ಅಮೆರಿಕದ ದಾಳಿಗಳು ಮುಂದುವರಿಯುತ್ತವೆ ಎಂದು ಎಚ್ಚರಿಸಿದ್ದಾರೆ. ಪಶ್ಚಿಮ ಏಷ್ಯಾದ ಅಮೆರಿಕನ್ನರು, ಈ ಪ್ರದೇಶವನ್ನು ತೊರೆಯಬೇಕು ಅಥವಾ ಸಂಘರ್ಷ ಉಲ್ಬಣಗೊಂಡರೆ ಹೊರಡಲು ಸಿದ್ಧರಾಗಿರಬೇಕು ಎಂದು ಅಮೆರಿಕ ವಿದೇಶಾಂಗ ಇಲಾಖೆ ಹೊಸದಾಗಿ ಭದ್ರತಾ ಸಲಹೆಯನ್ನು ನೀಡಿದೆ. ಅಮೆರಿಕ ಬೆಂಬಲಿತ ಕದನ ವಿರಾಮ ನಿಯಮದಡಿಯಲ್ಲಿ ಶಸ್ತ್ರಾಸ್ತ್ರ ತ್ಯಜಿಸಲು ಸಿದ್ಧ ಎಂದು ಹಮಾಸ್ ಘೋಷಿಸಿದ್ದರೂ ಇಸ್ರೇಲ್ ಹೊಸದಾಗಿ ದಾಳಿಗಳನ್ನು ನಡೆಸುತ್ತಿದೆ. ಗಾಜಾ ಮತ್ತು ಲೆಬನಾನ್‌ನಲ್ಲೂ ಉದ್ವಿಗ್ನತೆ ತೀವ್ರಗೊಂಡಿದೆ. ಏತನ್ಮಧ್ಯೆ, ದಾಳಿ

ನಡೆದರೆ, ಪಶ್ಚಿಮ ಏಷ್ಯಾದಾದ್ಯಂತ ಪ್ರಮುಖ ಇಸ್ರೇಲ್ ಮೂಲಸೌಕರ್ಯ ಮತ್ತು ಅಮೆರಿಕದ ಇಂಧನ ಸೌಲಭ್ಯಗಳ ಮೇಲೆ ದಾಳಿ ಮಾಡಲಾಗುವುದು ಎಂದು ಇರಾನ್ ಎಚ್ಚರಿಸಿದೆ.

**<>><><*><><<>**

ಗ್ಲಾಸ್ಗೋದಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟ ೨೦೨೬ ರಲ್ಲಿ ನಡೆದ ೧೦ನೇ ದಿನದ ಪದಕ ಪಟ್ಟಿಯಲ್ಲಿ ಭಾರತ ನಾಲ್ಕನೇ ಸ್ಥಾನಕ್ಕೆ ಏರಿದ್ದು, ನಿನ್ನೆ ೧೬ ಪದಕಗಳನ್ನು ಗಳಿಸಿದೆ. ಈ ಮೂಲಕ ಭಾರತದ ಪದಕಗಳ ಸಂಖ್ಯೆ ೩೯ ಕ್ಕೆ ಏರಿಕೆಯಾಗಿದೆ. ಇದರಲ್ಲಿ ೧೩ ಚಿನ್ನ, ೧೭ ಬೆಳ್ಳಿ ಮತ್ತು ೯ ಕಂಚಿನ ಪದಕಗಳು ಸೇರಿವೆ. ಬಾಕ್ಸಿಂಗ್ ತಂಡ ಮುನ್ನಡೆ ಸಾಧಿಸಿದೆ. ಭಾರತ, ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ದಾಖಲೆಯ ಏಳು ಚಿನ್ನ ಮತ್ತು ಮೂರು ಬೆಳ್ಳಿ ಪದಕಗಳೊಂದಿಗೆ ಬಾಕ್ಸಿಂಗ್ ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಚಿನ್ನದ ಪದಕ ವಿಜೇತರಲ್ಲಿ, ಅಂಕುಶ್ ಪಂಘಲ್, ಪುರುಷರ ೮೦ ಕೆಜಿ ಫೈನಲ್‌ನಲ್ಲಿ ಇಂಗ್ಲೆಂಡ್‌ನ ಡಿಮೆಜಿ ಶಿಟ್ಟು ಅವರನ್ನು ४-೧ ಅಂತರದಿಂದ ಸೋಲಿಸಿದರೆ, ಸಚಿನ್ ಸಿವಾಚ್, ಪುರುಷರ ೬೦ ಕೆಜಿ ವಿಭಾಗದಲ್ಲಿ ನಮೀಬಿಯಾದ ಟ್ರಯಗೇನ್ ಮಾರ್ನಿಂಗ್ ಎನ್‌ಡೆವೆಲೊ ಅವರನ್ನು ೩-೨ ಅಂತರದಿಂದ ಸೋಲಿಸಿ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ಭಾರತೀಯ ಬಾಕ್ಸಿಂಗ್ ಚಿನ್ನದ ಪದಕ ವಿಜೇತರಲ್ಲಿ ಜೈಸ್ಮಿನ್ ಲಂಬೋರಿಯಾ, ಪ್ರೀತಿ ಪವಾರ್, ಸಾಕ್ಷಿ ಚೌಧರಿ, ಪ್ರಿಯಾ ಘಂಘಾಸ್ ಮತ್ತು ಅರುಂಧತಿ ಚೌಧರಿ ಸೇರಿದ್ದಾರೆ. ಭಾರತದ ಮೂವರು ಬಾಕ್ಸರ್‌ಗಳಾದ ನರೇಂದರ್ ಬೆರ್ವಾಲ್, ಒಲಿಂಪಿಕ್ ಪದಕ ವಿಜೇತೆ ಲೊವ್ಲಿನಾ ಬೊರ್ಗೊಹೈನ್ ಮತ್ತು ಜಾದುಮಣಿ ಸಿಂಗ್ ಬೆಳ್ಳಿ ಪದಕಗಳನ್ನು ಗಳಿಸಿದರು.  ಪುರುಷರ ೯೦+ ಕೆಜಿ ಫೈನಲ್‌ನಲ್ಲಿ ನರೇಂದರ್, ಇಂಗ್ಲೆಂಡ್‌ನ ದಮರ್ ಥಾಮಸ್ ವಿರುದ್ಧ ಸೋತರು. ಮಹಿಳೆಯರ ೭೫ ಕೆಜಿ ಫೈನಲ್‌ನಲ್ಲಿ ಆಸ್ಟ್ರೇಲಿಯಾದ ಎಮ್ಮಾ-ಸ್ಯೂ ಗ್ರೀನ್‌ಟ್ರೀ ವಿರುದ್ಧ ಲವ್ಲಿನಾ ४-೧ ಅಂತರದಿಂದ ಸೋತರು. ಪ್ರೀತಿ, ಕೆನಡಾದ ಸ್ಕಾರ್ಲೆಟ್ ಡೆಲ್ಗಾಡೊ ವಿರುದ್ಧ ೫-೦ ಅಂತರದಿಂದ ಜಯಗಳಿಸುವ ಮೂಲಕ ಮಹಿಳೆಯರ ೫४ ಕಿಲೋಗ್ರಾಂ ಬಾಕ್ಸಿಂಗ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ಹಾಲಿ ವಿಶ್ವ ಚಾಂಪಿಯನ್ ಜೈಸ್ಮಿನ್, ಮಹಿಳೆಯರ ೫೭ ಕಿಲೋಗ್ರಾಂ ಫೈನಲ್‌ನಲ್ಲಿ ಉತ್ತರ ಐರ್ಲೆಂಡ್‌ನ ಮೈಕೆಲಾ ವಾಲ್ಷ್ ಅವರನ್ನು ಸೋಲಿಸುವ ಮೂಲಕ ೫-೦ ಅಂತರದಿಂದ ಗೆಲುವು ಸಾಧಿಸಿದರು. ಸಾಕ್ಷಿ, ಮಹಿಳೆಯರ ೫೧ ಕಿಲೋಗ್ರಾಂ ಫೈನಲ್‌ನಲ್ಲಿ ಇಂಗ್ಲೆಂಡ್‌ನ ರೂಬಿ ವೈಟ್ ಅವರನ್ನು ೫-೦ ಅಂತರದಿಂದ ಗೆದ್ದರು. ಮಹಿಳೆಯರ ೬೦ ಕೆಜಿ ಫೈನಲ್‌ನಲ್ಲಿ, ಕೆನಡಾದ ಮೇರಿ-ಬಥೌಲ್ ಅಲ್-ಅಹ್ಮದಿಹ್ ಅವರನ್ನು ४-೧ ಅಂತರದಿಂದ ಸೋಲಿಸಿ, ಪ್ರಿಯಾ ವಿಜೇತರಾದರು. ಅರುಂಧತಿ ಚೌಧರಿ ಮಹಿಳೆಯರ ೭೦ ಕೆಜಿ ಫೈನಲ್‌ನಲ್ಲಿ ಇಂಗ್ಲೆಂಡ್‌ನ ಚಾಂಟೆಲ್ಲೆ ರೀಡ್ ಅವರನ್ನು ಸೋಲಿಸಿದರು.

<>><><*><><<>

ಟೆನಿಸ್‌ನಲ್ಲಿ, ಭಾರತದ ರಾಮ್‌ಕುಮಾರ್ ರಾಮನಾಥನ್ ಮತ್ತು ವಿಜಯ್ ಸುಂದರ್ ಪ್ರಶಾಂತ್, ಬಾನ್ ಓಪನ್ ೨೦೨೬ ರಲ್ಲಿ ಡಬಲ್ಸ್ ಪ್ರಶಸ್ತಿ ವಿಜೇತರಾದರು. ಭಾರತೀಯ ಜೋಡಿ, ಇಂಗ್ಲೆಂಡ್‌ನ ಸ್ಕಾಟ್ ಡಂಕನ್ ಮತ್ತು ಸ್ವೀಡನ್‌ನ ಆಡಮ್ ಹೈನೋನೆನ್ ಅವರನ್ನು ೭-೬, ೬-೩ ಸೆಟ್‌ಗಳಿಂದ ಸೋಲಿಸಿದರು. ಸೆಮಿಫೈನಲ್‌ನಲ್ಲಿ ಇಗ್ನಾಸಿಯೊ ಕ್ಯಾರೊ ಮತ್ತು ಫೆಡೆರಿಕೊ ಅಗಸ್ಟಿನ್ ಗೊಮೆಜ್ ವಿರುದ್ಧ ೬-೨, ೬-೩ ಅಂತರದಲ್ಲಿ ಜಯಗಳಿಸಿದ ನಂತರ ಅವರು ಫೈನಲ್‌ಗೆ ಲಗ್ಗೆ ಇಟ್ಟಿದ್ದರು. ೩೧ ವರ್ಷದ ರಾಮ್‌ಕುಮಾರ್ ಈಗ ತಮ್ಮ ವೃತ್ತಿಜೀವನದಲ್ಲಿ ೧೩ ಎಟಿಪಿ ಚಾಲೆಂಜರ್ ಪ್ರಶಸ್ತಿಗಳನ್ನು ಗೆದ್ದಿದ್ದಾರೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><><ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ ><><<>**